6) ವರದಿಯನ್ನೊಪ್ಪಿಸುವುದು

ಶ್ರೀ ಮನೋಹರ್ ಹೆಚ್ ತಹಸೀಲ್ದಾರ್ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯ ಅರ್ಜಿಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಮೂರನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅನುಬಂಧ : 1,2,3 ಮತ್ತು 4

7) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ (ಮುಂದು)
ಬೆಸ್ಕಾಂ ಕಂಪನಿಯವರು ವಿದ್ಯುತ್ ಮೀಟರ್ ಪರ್ಚೇಸ್ ಮಾಡುವ ಸಲುವಾಗಿ ಟೆಂಡರ್ ಕರೆದಿರುವುದರ ಬಗ್ಗೆ

5.50 ಪಿಎಂ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಬ್ರೀಫಾಗಿ ಹೇಳುತ್ತಿದ್ದೇನೆ. ಇಲ್ಲಿ ಇವತ್ತು ಬೆಸ್ಕಾಂನವರು ವಿದ್ಯುತ್ ಮೋಟರ್ ಪರ್ಚೇಸ್ ಸಲುವಾಗಿ ಟೆಂಡರನ್ನು ಕರೆದಿದ್ದರು. ಆ ಟೆಂಡರ್‌ನಲ್ಲಿ ನಮ್ಮ ದೇಶೀಯ 17 ಕಂಪನಿಗಳು ಈ ಮೋಟರ್‌ಗಳನ್ನು ಸಪ್ಲೈ ಮಾಡುವುದಕ್ಕೆ ಭಾಗವಹಿಸಿದ್ದವು ಮತ್ತು ವಿದೇಶೀಯ ಐದು ಕಂಪನಿಗಳು ಅದರಲ್ಲಿ ಭಾಗವಹಿಸಿದ್ದವು. ನಮ್ಮ ದೇಶೀಯ ಕಂಪನಿಗಳು ಒಂದು ಮೋಟರ್‌ಗೆ ರೂ. 626.30 ಪೈಸೆಯಂತೆ ಅವರು ಕೋಟ್ ಮಾಡಿದ್ದರು. ಆ 17 ಕಂಪನಿಗಳೂ ಹತ್ತು ರೂಪಾಯಿ ಹೆಚ್ಚು ಕಡಿಮೆ ಮಾಡಿದ್ದರು. ಆದರೆ ವಿದೇಶೀಯ ಕಂಪನಿಗಳು ಒಂದು ಮೋಟರ್‌ಗೆ 897 ರೂಪಾಯಿಗಳಿಂದ 903 ರೂ.ಗಳ ವರೆಗೆ ಅವರು ಕೋಟ್ ಮಾಡಿದ್ದರು. ಆಮೇಲೆ ಮುಂದೆ ಒಂದು ಬಹಳ ಮಹತ್ವದ ವಿಷಯವೆಂದರೆ ಇದೇ ಬೆಸ್ಕಾಂನವರು ನಮ್ಮ ದೇಶೀಯ ಕಂಪನಿಗೆ 2003ರ ಜೂನ್ 18ನೇ ತಾರೀಖಿಗೆ 626 ರೂ.ಗಳ ಹಾಗೆ ಆರು ಲಕ್ಷ ಮೋಟರ್‌ಗಳ ಖರೀದಿಗೆ ಈಗಾಗಲೇ ಅವರು ಒಪ್ಪಿಕೊಂಡಿದ್ದಾರೆ, ಅಗ್ರಿಮೆಂಟೂ ಆಗಿದೆ. ಅವರಿಗೆ ಆರ್ಡರ್ ಕೊಟ್ಟಿದೆ. ಇದು ಕೇವಲ ಒಂದು ತಿಂಗಳ ಹಿಂದೆ ಆಗಿದೆ. ಆದರೆ ನಾವು ಇವತ್ತು ಜುಲೈ ತಿಂಗಳಲ್ಲಿದ್ದೇವೆ. ಇವತ್ತು ಹೊಸದಾಗಿ ಟೆಂಡರ್ ಕರೆದು ಆ ಟೆಂಡರ್‌ನಲ್ಲಿ 17 ದೇಶೀಯ ಕಂಪನಿಗಳು ಮತ್ತು 5 ವಿದೇಶೀಯ ಕಂಪನಿಗಳು ಭಾಗವಹಿಸಿದ್ದವು. ಆದರೆ ಇಲ್ಲಿ ಆದಂಥ ಅವಾಂತರವೇನೆಂದರೆ ಇವತ್ತು ದೇಶೀಯ ಕಂಪನಿಗಳಿಂದ 626 ರೂ.ಗಳ ಹಾಗೆ 4 ಲಕ್ಷದ 80 ಸಾವಿರ ಮೋಟರ್‌ಗಳನ್ನು ಖರೀದಿಸಲು ಹೊಸದಾಗಿ ಟೆಂಡರ್ ಕರೆದದ್ದು. 4 ಲಕ್ಷದ 80 ಸಾವಿರ ಮೋಟರ್‌ಗಳನ್ನು ಇವತ್ತು ಖರೀದಿ ಮಾಡುವುದಕ್ಕೆ ಟೆಂಡರ್‌ನ್ನು ಏನು ಕರೆದಿದ್ದಾರೆ, ಅದರಲ್ಲಿ ಅದೇ ದೇಶೀಯ ಕಂಪನಿಗಳು ಮತ್ತೆ ಕಳೆದ ತಿಂಗಳು ಏನು ಕೋಟ್ ಮಾಡಿದ್ದರಲ್ಲ, ಅದೇ ರೇಟ್‌ನಲ್ಲಿ ಅಂದರೆ 626 ರೂ.ಗಳ ರೇಟ್‌ನಲ್ಲಿಯೇ ಅವರು ಖರೀದಿಗೆ ಕೊಡಲಿಕ್ಕೆ ಟೆಂಡರ್‌ನಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿ ಬಂದಂಥದ್ದು ಏನೆಂದರೆ ಕಳೆದ ಬಾರಿ ಬೆಸ್ಕಾಂನವರು ಈ ದೇಶೀಯ ಕಂಪನಿಯ ಜೊತೆ ಆರು ಲಕ್ಷ ಮೋಟರ್‌ಗಳನ್ನು 626 ರೂ. ಹಾಗೆ ಖರೀದಿ ಮಾಡುವುದಕ್ಕೆ ಒಪ್ಪಿಕೊಂಡಿದ್ದರು. ಆದರೆ ಇವತ್ತೇನಾಯಿತು? ಈ ಹೊಸ ಟೆಂಡರ್‌ನ್ನು ನೀವು ಕರೆದಮೇಲೆ ಆ ಟೆಂಡರ್‌ನಲ್ಲಿ ಕೆಲವೊಂದು ಕರೆಕ್ಷನ್‌ಗಳನ್ನು ಮಾಡಿ ಕೆಲವೊಂದು ಕ್ಲಾಜಸ್‌ಗಳನ್ನು ಛೇಂಜ್ ಮಾಡಿ ಕೆಲವು ಹೊಸದಾಗಿ ಕ್ಲಾಜಸ್‌ಗಳನ್ನು ಸೇರಿಸಿದಿರಿ. ಅದರಲ್ಲಿ ಮುಖ್ಯವಾಗಿ ಹೊಸ ಕ್ಲಾಜಸ್ ಏನೆಂದರೆ ಆ ಟೆಂಡರ್‌ನಲ್ಲಿ